ಗಳನ್ನು ಮಾಡುತ್ತಾರೆ. ಅದೇ ರೀತಿಯಲ್ಲಿ ನಮ್ಮಲ್ಲಿರುವ ಟೋಕರೆಕೋಳಿ ಜನಾಂಗದವರಿಗೂ ಕೂಡ ತಾರತಮ್ಯವನ್ನು ಮಾಡಿ ಸರ್ಟಿಫಿಕೇಟ್ ಕೊಡುತ್ತಿಲ್ಲ. ದಯಮಾಡಿ ಸರ್ಕಾರ ಈ ಬಗ್ಗೆ ಚಿಂತನೆ ಮಾಡಿ, ಇನ್ನೊಂದು ಸುತ್ತೋಲೆಯನ್ನು ಹೊರಡಿಸಿ, ಎಲ್ಲಾ ಜನಾಂಗದವರಿಗೂ ಸರ್ಟಿಫಿಕೇಟ್ ಕೊಡಬೇಕೆಂದು ಹೇಳಿ ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಡಾ. ಸಾರ್ವಭೌಮ ಸಾತಗೌಡ ಬಗಲಿ (ಇಂಡಿ) : 1994 ರ ಸರ್ಕಾರಿ ಆದೇಶದಲ್ಲಿ ಏನು ಹೇಳಿದ್ದಾರೆಂದರೆ ಶಾಲಾ ಸರ್ಟಿಫಿಕೇಟ್‌ನಲ್ಲಿ ಇರುವಂತ ಹವರ ಜಾತಿ, ಅದೇ ಜಾತಿಗೆ ಸೇರಿರುವರೆಂಬುದಕ್ಕೆ ಪ್ರಬಲ ಸಾಕ್ಷಿಯೆಂದು ಪರಿಗಣಿಸಿ. They have used specific words. School certificate ನಲ್ಲಿ ಅವರ ಜಾತಿ ಟೋಕರೆಕೋಳಿ ಎಂದು ನಮೂದಾಗಿದ್ದರೆ it is a very strong evidence. It should be accepted as it is. ಈ ರೀತಿಯ ಸರ್ಕಾರಿ ಆದೇಶವಿದ್ದರೂ ಸಹ ಮಾನ್ಯ ಜಿಲ್ಲಾಧಿಕಾರಿಗಳು ಜನಗಳಿಗೆ ಏಕೆ ಈ benefit ಕೊಡುತ್ತಿಲ್ಲ.

ಶ್ರೀ ಡಿ.ಎನ್. ಜೀವರಾಜ್ : ಮಾನ್ಯ ಅಧ್ಯಕ್ಷರೆ, ಅವರು ಕೇಳಿರುವುದನ್ನು ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಶಾಲಾ ದಾಖಲಾತಿಯನ್ನೂ ಸಹ ಒಂದು ಮಾನದಂಡವಾಗಿ ತೆಗೆದುಕೊಳ್ಳುತ್ತೇವೆ. ಅದರ ಜೊತೆಗೆ ಲೋಕಲ್‌ನಲ್ಲಿ ಮಹಜರ್ ಮಾಡಬೇಕು ಹಾಗೂ ಸುತ್ತಮುತ್ತಲಿರುವ ಸಂಬಂಧಿಕರನ್ನು ನೋಡಿ ಮಾಡುತ್ತೇವೆಂದು ಹೇಳಿದ್ದೇವೆ. ಸರ್ಕಾರ ಯಾವುದೇ ತೊಂದರೆಯಾಗದಂತೆ ಕ್ರಮ ತೆಗೆದುಕೊಳ್ಳುತ್ತದೆ.

ಅಧ್ಯಕ್ಷರು : ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಚರ್ಚೆ ಬೇಡ ಸಾಕು.

10. ಪ್ರಕಟಣೆ :

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 118 ರ–ಮೇರೆಗೆ ವಿಧಾನ ಪರಿಷತ್ತು 2012ನೇ ಸಾಲಿನ ಕರ್ನಾಟಕ ಧನ ವಿನಿಯೋಗ ಸಂಖ್ಯೆ–4 ವಿಧೇಯಕವನ್ನು

ದಿ: 13.12.2012 ರಂದು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

ಶ್ರೀ ದೊಡ್ಡನಗೌಡ ಜಿ. ಪಾಟೀಲ್ : ನಿಯಮ 69ರಲ್ಲಿ ಚರ್ಚೆಯಿದೆ.

ಅಧ್ಯಕ್ಷರು : ಆಮೇಲೆ ಸಮಯ ಕೊಡುತ್ತೇನೆ.

11. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

1. ವಿಷಯ : ಪುತ್ತೂರ ತಾಲ್ಲೂಕಿನಲ್ಲಿ ರೈತರು ಎದುರಿಸುತ್ತಿರುವ ಸಮಸ್ಯೆ ಬಗ್ಗೆ.

ಶ್ರೀಮತಿ ಮಲ್ಲಿಕಾ ಪ್ರಸಾದ್ (ಪುತ್ತೂರು) : ಪುತ್ತೂರು ತಾಲ್ಲೂಕಿನ ನನ್ನ ವಿಧಾನಸಭಾ ಕ್ಷೇತ್ರದಲ್ಲಿ ಸಾಮಾನ್ಯವಾಗಿ ರೈತರು ಎದುರಿಸುವಂತಹ ಎರಡು ಬರ್ನಿಂಗ್ issues ತಮ್ಮ ಮುಂದೆ ಹೇಳಬಯಸುತ್ತೇನೆ. ವಿಷಯವೇನೆಂದರೆ, ಭೂ ಮಂಜೂರಾತಿ ಪ್ಲಾಟಿಂಗ್‌ನ ಒಂದರಿಂದ ಐದವರೆಗಿನ ಪದ್ಧತಿಯ ಕಡತವನ್ನು ರುದ್ದಗೊಳಿಸಿ ಏಕ ವ್ಯಕ್ತಿ ಸುತ್ತೋಲೆ ಹೊರಡಿಸುವ ಬಗ್ಗೆ. ಪುತ್ತೂರು ತಾಲ್ಲೂಕಿನ ವಿವಿಧ ಹಂತಗಳಲ್ಲಿ ರೈತರಿಗೆ ಭೂ ಮಂಜೂರಾತಿ ಅಕ್ರಮ ಸಕ್ರಮದಡಿ ಮಂಜೂರಾದ ಪ್ರಕರಣಗಳು ಸೇರಿದಂತೆ ಪ್ಲಾಟಿಂಗ್ ಆಗಲು, ದುರಸ್ತಿ ಪಡಿಸಲು 7,000 ಕಡತಗಳು ಇನ್ನೂ ಬಾಕಿಯಿರುವುದಾಗಿ ನನ್ನ ಗಮನಕ್ಕೆ ಬಂದಿರುತ್ತದೆ. ಸರ್ಕಾರದ ಇತ್ತೀಚಿನ ಸುತ್ತೋಲೆಯ ಆದೇಶದ ಪ್ರಕಾರ ಪ್ಲಾಟಿಂಗ್ ಮಾಡಲು ಈ ಸರ್ವೆ ನಂಬರ್‌ನಲ್ಲಿ ಮಂಜೂರಾದ ಎಲ್ಲಾ ಕಡತಗಳು ನಮೂನೆ 1 ರಿಂದ 5 ರವರೆಗಿನ ಎಲ್ಲಾ ಮಾಹಿತಿಗಳನ್ನು ತಯಾರಿಸಿ ಅನುಮೋದನೆ ಪಡೆದು ಕೊಂಡು ಆ ನಂತರ ಪ್ಲಾಟಿಂಗ್ ಮಾಡಬೇಕಾಗುತ್ತದೆ. ಬಹುಶಃ ಕಳೆದೆರೆಡು ವರ್ಷಗಳಿಂದ ನನ್ನ ವಿಧಾನಸಭಾ ಕ್ಷೇತ್ರದಲ್ಲಿ ಮಂಜೂರಾದ ಪ್ರಕರಣಗಳು ಪ್ಲಾಟಿಂಗ್ ಆಗಿರುವುದು ಕಂಡು ಬಂದಿರುವುದಿಲ್ಲ. ಕಾರಣ ನನ್ನ ಕ್ಷೇತ್ರದಲ್ಲಿ ಒಂದು ಸರ್ವೆ ನಂಬರ್‌ನಲ್ಲಿ 30 ರಿಂದ 100 ಕ್ಕೂ ಹೆಚ್ಚು ಮೇಲ್ಪಟ್ಟು ಖಾತೆದಾರರಾಗಿದ್ದಾಗ, ಈ ಎಲ್ಲಾ ಖಾತೆಗಳನ್ನು ಸೇರಿಸಿಕೊಂಡು ಪ್ಲಾಟಿಂಗ್ ಮಾಡಲು ಸಾಧ್ಯವಾಗುತ್ತಿಲ್ಲ. ಇದರಿಂದ ರೈತರಿಗೆ ಜಮೀನಿನ ಮೇಲೆ